**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ**

**ಎಂ ವಿ ಸಿ. 627/2021**

**ಪಿಡಬ್ಲೂಃ 2**

| | |
|---|---|
| **ಸಾಕ್ಷಿಯ ಹೆಸರು** | **ಚಿದಾನಂದ** |
| **ತಂದೆ ಹೆಸರು** | **ಬಸಪ್ಪಾಜಿ** |
| **ವಯಸ್ಸು** | **49 ವರ್ಷ** |
| **ಉದ್ಯೋಗ** | **ಪಿ ಐ, ಯಶವಂತಪುರ ಸಂಚಾರಿ ಪೊಲೀಸ್ ಠಾಣೆ , ಬೆಂಗಳೂರು** |
| **ವಾಸ** | **ಬೆಂಗಳುರು** |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 01.07.2025**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

1. ಮೊಕದ್ದಮೆ ಸಂಃ 106/2019 ಮೇಲುಕೋಟೆ ಪೊಲೀಸ್ ಠಾಣೆಗೆ ಸಂಬಂಧಿಸಿದ ದೃಢೀಕೃತ ಅಂತಿಮ ವರದಿಗೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರು ಪಡಿಸಲು ಈ ಘನ ನ್ಯಾಯಾಲಯ ನೋಟೀಸ್ ನೀಡಿದ್ದು, ನ್ಯಾಯಾಲಯದ ಆದೇಶದಂತೆ ಈ ದಿನ ಸದರಿ ಪ್ರಕರಣಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸುತ್ತಿದ್ದೇನೆ. ಸದರಿ ಮೊಕದ್ದಮೆ ಸಂಃ 106/2019 ಮೇಲುಕೋಟೆ ಪೊಲೀಸ್ ಠಾಣೆಯ ಸಂಪೂರ್ಣ ಅಂತಿಮ ವರದಿಯ ದೃಢೀಕೃತ ನಕಲಿನ  ಒಟ್ಟು 32 ಪುಟಗಳನ್ನು ಒಟ್ಟಾಗಿ ನಿಪಿ.11 ಎಂದು ಗುರುತಿಸಲಾಯಿತು.

***ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ***

*2. ನಿಪಿ.11ರಲ್ಲಿ ಕೆಎ-11/ಯು-8436 ಮೋಟಾರ್ ಸೈಕಲ್ ನಿಂದ ಅಪಘಾತವಾಗಿದೆ ಎಂದು ಆರೋಪ ಪಟ್ಟಿ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಕಣ್ತಪ್ಪಿನಿಂದ ಆ ರೀತಿ ಬೆರಳಚ್ಚು ಆಗಿದೆ ಆದರೆ ಅಪಘಾತ ಪಡಿಸಿದ ವಾಹನ ಸಂಃಕೆಎ-02/ಇಪಿ-4832 ಸ್ಪೆಂಡರ್ ಸವಾರನ ತಪ್ಪಿನಿಂದ ಅಪಘಾತವಾಗಿದೆ ಎಂದು ಹೇಳುತ್ತಾರೆ. ಆರೋಪ ಪಟ್ಟಿಯ ಕಲಂ 17ರಲ್ಲಿ ನಮೂದಾಗಿರುವ ಎರಡು ವಾಹನಗಳಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ನೀವು ಸಂಗ್ರಹಿಸಿರುತ್ತೀರಾ ಎಂದರೆ ಸಾಕ್ಷಿ ಕೆಎ-11/ಯು-8436 ಬೇರೆ ಪ್ರಕರಣದ ವಾಹನ, ಆ ಪ್ರಕರಣದಲ್ಲಿ ದಾಖಲೆಗಳನ್ನು ಸಂಗ್ರಹ ಮಾಡಿರುತ್ತದೆಂದು ಹೇಳುತ್ತಾರೆ.*

***ಮರು ವಿಚಾರಣೆ ಇಲ್ಲ.***

***(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).***

***ಸಾ.ಓ.ಹೇ.ಕೆ.ಸ.ಇ.***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ.ಪಾಂಡವಪುರ.***